**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ**

**ಸಿಸಿ ನಂ. 25/2019**

ಚಾಸಾ- 1 ಫ್ರಾಸಾ-3

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 16-10-2025

| | | |
|---|---|---|
| ಹೆಸರು | : | ಪರಸಪ್ಪ |
| ತಂದೆಯ ಹೆಸರು | : | ಉದಾಂಡಪ್ಪ |
| ವಯಸ್ಸು | : | 70 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಹೂವಿನಹಳ್ಳಿ |

-: **ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-**

ಚಾಸಾ 6 ರಿಂದ 9, 13 ರಿಂದ 16 ಪರಿಚಯ ಇರುತ್ತಾರೆ. ಚಾಸಾ 11 ಸೊಸೆ, ಚಾಸಾ 12 ಹೆಂಡತಿ ಇರುತ್ತಾರೆ. ಮೃತ ತಿಪ್ಪಣ್ಣ ಮಗನಾಗಬೇಕು.

ಚಾಸಾ 6 ಮತ್ತು ಮೃತ ತಿಪ್ಪಣ್ಣ ಒಂದು ದಿನ ಮದ್ಯಾಹ್ನ 2 ಗಂಟೆಗೆ ಚೌಡಾಪುರಕ್ಕೆ ಹೋಗಿರುತ್ತಾರೆ. ಅಲ್ಲಿಂದ 3 ಗಂಟೆಗೆ ಮರಳಿ ಬಂದಿರುವಾಗ ಚಿನಮಗೇರಾದ ಮಹಾಂತೇಶ್ವರ ಗುಡ್ಡದ ಹತ್ತಿರ ಒಂದು ಪಲ್ಸರ ಮೋಟರ ಸೈಕಲ ಮತ್ತು ಶೈನ ಮೋಟರ ಸೈಕಲ ನಡುವೆ ಡಿಕ್ಕಿಯಾಗಿ ಅಪಘಾತ ಆಗಿರುತ್ತದೆ. ಚಾಸಾ 6 ರವರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು ಮೃತ ನನ್ನ ಮಗನಿಗೆ ಕೈ ಕಾಲು ಮುರಿದು ದೇಹ ಗಂಭೀರವಾಗಿ ಗಾಯಗೊಂಡಿತ್ತು. ಪೋಲಿಸರು ಪಂಚನಾಮೆ ಮಾಡಿ 108 ವಾಹನದಲ್ಲಿ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ನನ್ನ ಮಗ ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾನೆ. ಆನಂತರ ಕೋರ್ಟ ಕಚೇರಿಗೆ ದೂರು ನೀಡಲು ಹೋಗಿರುತ್ತೇವೆ.

ಸಾಕ್ಷಿಗೆ ದೂರಿನ ಪ್ರತಿ ತೋರಿಸಿದ್ದು ಸಾಕ್ಷಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ದೂರನ್ನು ಈಗಾಗಲೇ ನಿಪಿ-**10** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**10**(ಎ) ಎಂದು ಗುರುತಿಸಲಾಯಿತು.

ಮೃತನು ಸವಾರ ಮಾಡುತ್ತಿದ್ದ ಪಲ್ಸರ ವಾಹನದ ಭಾವಚಿತ್ರ ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ **2** ರಿಂದ **5** ಎಂದು ಗುರುತಿಸಲಾಗಿದೆ.

ಮೃತನ ಶವ ಪಂಚನಾಮೆ ಕಾಲಕ್ಕೆ ತೆಗೆದ ಭಾವಚಿತ್ರ ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗ ನಿಪಿ **11** ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದೆ ಇರುವ ಭೀಮಾಶಂಕರ ಎನ್ನುವ ವ್ಯಕ್ತಿ ನನ್ನ ಮಗನಿಗೆ ಅಘಾತ ಪಡಿಸಿರುತ್ತಾನೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ **SSP** ವಕೀಲರಿಂದಃ-

ನನ್ನ ಮಗ ಅಪಘಾತದಲ್ಲಿ ತೀರಿಕೊಂಡಿರುತ್ತಾನೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನ ಸಾವಿಗೆ ವಿಮೆ ಪರಿಹಾರ ಪಡೆಯಲು ಆರೋಪಿತನ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆಸರಿಯಲ್ಲ.

ಮರು ವಿಚಾರಣೆಃ - ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ